ಮೇಲೆ ಬಂದಳು. ದೊಡ್ಡದಾದ ಹಜಾರದ ಎರಡೂ ಬದಿಯಲ್ಲಿ ರೂಮುಗಳು. ಒಂದರ ಬಾಗಿಲು ಮುಚ್ಚಿತ್ತು. ಮತ್ತೊಂದು ಕಡೆ ಬಾಲ್ಕನಿಯ ಬಾಗಿಲು ತೆರೆದಿತ್ತು. ಹೊರಗೆ ತೆಂಗಿನ ಗರಿಗಳು ಚಳಿಗಾಳಿಗೆ ಅಲುಗಾಡುತ್ತಿರುವುದು ಕಂಡಿತು. ಮೋಡ ಮುಸುಕಿ ವಾತಾವರಣ ಸಾಕಷ್ಟು ತಂಪಾಗಿತ್ತು. ಹಜಾರದಲ್ಲಿ ಸೋಫಾವನ್ನು ಹಾಕಲಾಗಿತ್ತು.

'ನೀವು ಕುಳಿತಿರಿ ಮೇಡಂ, ನಮ್ಮ ಬಾಸ್ ಇನ್ನೇನು ಬಂದುಬಿಡ್ತಾರೆ....' ಎಂದ ಆತ ತಾನು ಹಾಕಿದ್ದ ದಪ್ಪ ಗಾಜಿನ ಕನ್ನಡಕವನ್ನು ಸರಿ ಮಾಡಿಕೊಳ್ಳುತ್ತಾ ಮಹಡಿ ಇಳಿದು ಹೊರಟುಹೋದ.

ಅಂದರೆ....ಈ ಮಹಡಿಯಲ್ಲಿ ತಾನೊಬ್ಬಳೇ....ಅವಳಿಗೆ ಭಯವಾಯಿತು. ತಾವು ತಮಗೆ ಅರಿವಿಲ್ಲದಂತೆ ಮೋಸದ ಜಾಲದೊಳಕ್ಕೆ ಸೆಳೆಯಲ್ಪಟ್ಟಿದ್ದೇವೆಯೇ?..ಉದ್ಯಾನನಗರಿಯೆಂದು ಹೆಸರುವಾಸಿಯಾಗಿದ್ದ ಬೆಂಗಳೂರು ಈಗ ಸಿಲಿಕಾನ್ ಸಿಟಿ ಎಂಬ ಹೆಸರಿನೊಂದಿಗೆ ಹೆಚ್ಚು ಅಪರಾಧಿಗಳಿರುವ ನಗರ ಎಂದೂ ಹೆಸರಾಗುತ್ತಿದೆಯಲ್ಲ. ಇಲ್ಲಿ ಸರಾಸರಿ ಗಂಟೆಗೆ ನಾಲ್ಕು ಅಪರಾಧಗಳು ನಡೆಯುತ್ತದೆ ಎಂದು ತಂದೆ ಹೇಳಿದ್ದು ತಟ್ಟನೆ ಅವಳಿಗೆ ನೆನಪಾಯಿತು. ಚಿಕ್ಕಮ್ಮ ಹೇಳಿದಂತೆ ಎಲ್ಲ ಉಸಾಬರಿ ಬಿಟ್ಟು ಹಾಯಾಗಿ ಬಂಗಲೆಯಲ್ಲಿದ್ದು ಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತೇನೋ ಎಂದುಕೊಂಡಳು. ಏನಾದರಾಗಲಿ ತಾವಿಲ್ಲಿ ಬಂಧಿಯಾಗಿರುವ ವಿಷಯವನ್ನು ತಂದೆಗೆ ತಿಳಿಸಿಬಿಡಬೇಕು. .ಯೋಚಿಸಿದವಳು ವ್ಯಾನಿಟಿ ಬ್ಯಾಗಿನಲ್ಲಿದ್ದ ಮೊಬೈಲನ್ನು ತೆಗೆದು ಅವರಿಗೊಂದು ಸಂದೇಶ ಕಳುಹಿಸಬೇಕೆಂದು ಪ್ರಯತ್ನಿಸುವಾಗಲೇ ಎದುರಿದ್ದ ರೂಮಿನ ಬಾಗಿಲು ತೆರೆದುಕೊಂಡಿತು.

ಋತು ಭಯದಿಂದಲೇ ಅತ್ತ ನೋಡತೊಡಗಿದಳು.

ಬರ್ಮುಡಾವೊಂದನ್ನು ತೊಟ್ಟು, ಹಗುರವಾದ ಟೀ ಶರ್ಟ್ ಧರಿಸಿದ್ದ ವ್ಯಕ್ತಿ....ಅರೆ...ಅದು...ಬೆಳಿಗ್ಗೆ ಕಾಲೇಜಿನಲ್ಲಿ ನೋಡಿದ್ದ ಕುಮಾರನಲ್ಲವೇ?. ಅವನು ತಮ್ಮನ್ನು ಅಪಹರಣ ಮಾಡಿಸಿದವನೇ?.ಅವಳಿಗೆ ನಂಬಲಾಗಲಿಲ್ಲ.

'ಹಾಯ್ ಋತು....ಹೇಗಿದ್ದಿ?'

ಅವನು ತನ್ನನ್ನು ಏಕವಚನದಿಂದ ಸಂಬೋಧಿಸುತ್ತಾ ಪಕ್ಕದಲ್ಲೇ ಕುಳಿತಾಗ ಬೆಚ್ಚಿದಳು....! ಇವನು ನಿಜಕ್ಕೂ ತಾನಂದುಕೊಂಡಂತೆ ತನ್ನ ಹೇಮಂತನೇ?.. ತನ್ನ ಹೇಮಂತ ಹೀಗೆ ಹುಡುಗಿಯರನ್ನು ಅಪಹರಣ ಮಾಡುವ ಮಟ್ಟಕ್ಕೆ ಇಳಿಯುತ್ತಾನೆಯೇ?....ಮೊದಲ ಬಾರಿಗೆ ಅವಳು ದ್ವಂದ್ವಕ್ಕೆ ಸಿಲುಕಿದ್ದಳು.

'ನಂಗೊತ್ತು ಋತು, ಒಬ್ಬ ಪತ್ತೇದಾರನಾಗಿ, ಪೊಲೀಸರಿಗೆ ಸಹಾಯ ಮಾಡುವವನಾಗಿ ಹೀಗೆ ಅಪಹರಣ ಮಾಡುವ ಮಟ್ಟಕ್ಕೆ ಹೇಗೆ ಇಳಿಯುತ್ತಾನೆ ಎಂದು ನೀನು ಯೋಚಿಸುತ್ತಿರಬೇಕು....ಇನ್ನೇನು ಮಾಡ್ಲಿ ಹುಡುಗಿ, ನಂಗೆ ಹೀಗೆ ಮಾಡ್ದೆ ಬೇರೆ ದಾರಿಯೇ ಇರಲಿಲ್ಲವಲ್ಲ.'

ಅವನು ತುಂಟತನದಿಂದ ನಗುತ್ತಾ ಅವಳ ಕಣ್ಣುಗಳನ್ನೇ ದೃಷ್ಟಿಸಿದಾಗ ಮತ್ತೆ ಹೇಮಂತನನ್ನೇ ಕಂಡಂತಾಗಿ ಅವಳಿಗೆ ದಿಗ್ಗೆನಿಸಿತು. ತನ್ನ ಅನಿಸಿಕೆ ನಿಜವೆಂದು ಒಪ್ಪಿಕೊಂಡರೆ ತನ್ನ ಹೇಮಂತ ಕೀಳು ಮಟ್ಟದ ವ್ಯಕ್ತಿಯೆಂದು ಕಣ್ಣೆದುರೇ ಸಾಬೀತಾಗುತ್ತದಲ್ಲವೇ?..ಇದೆಂತಹಾ ಸಂದಿಗ್ಧ....ಇದೆಲ್ಲಿಯ ಸಂಕಟ...

'ನಿಮ್ಮ ಉದ್ದೇಶ ಏನು ಅಂತಾದ್ರೂ ದಯವಿಟ್ಟು ಹೇಳಿ ಕುಮಾರ್, ನಾನು ಬಂಗಲೆಗೆ ಹೋಗ್ಬೇಕು, ಚಿಕ್ಕಮ್ಮ ನನಗಾಗಿ ಕಾಯ್ತಿರ್ತಾರೆ..' ಅವನಿಂದ ಬಲವಂತವಾಗಿ ದೃಷ್ಟಿ ಕೀಳುತ್ತಾ ಕಹಿಯಾಗಿ ಹೇಳಿದಳು.

ಅವನೊಮ್ಮೆ ತನ್ನ ದಟ್ಟವಾದ ಗುಂಗುರು ಕೂದಲಿನ ನಡುವೆ ಬೆರಳಾಡಿಸಿದ.

## ಕುಮಾರ್ ಅಲ್ಲ ಹೇಮಂತ!

'ಹೇಳ್ತೀನಿ ಋತು, ಅದಕ್ಕೆ ತಾನೇ ನಿನ್ನನ್ನು ಹೀಗೆ ಕರೆಸಿಕೊಂಡಿದ್ದೀನಿ....ನನ್ನ ನಿಜವಾದ ಹೆಸರು ಹೇಳಿ ಬಿಡ್ತೀನಿ, ಹೇಮಂತ ಕುಮಾರ್....ನಾನು ಹೈಸ್ಕೂಲು ಮುಗಿಯುವವರೆಗೂ ಓದಿದ್ದು ಇಲ್ಲೇ ಬೆಂಗಳೂರಿನಲ್ಲಿ, ಅದೂ ನೀನು ಓದುತ್ತಿದ್ದ ಸ್ಕೂಲಿನಲ್ಲಿ..'

ಅವನು ಒಂದೊಂದು ಶಬ್ದಗಳನ್ನೂ ನಿಧಾನವಾಗಿ ಉಚ್ಚರಿಸಿದಾಗ ಶಾಕ್ ಹೊಡೆದವಳಂತೆ ಅವನನ್ನೇ ನೋಡಿದಳು. ಹಾಗಾದರೆ ತನ್ನ ಅನಿಸಿಕೆ ಸರಿ.... ಇವನೇ ತನಗೆ ತಾಳಿ ಕಟ್ಟಿ ಪ್ರೇಮದಲ್ಲಿ ಕಟ್ಟಿ ಹಾಕಿದ ಅದೇ ಗುಂಗುರು ಕೂದಲಿನ, ಚಿಗುರು ಮೀಸೆಯ ಹದಿನಾರರ ಹುಡುಗ ಹೇಮಂತ, ಈ 13 ವರ್ಷಗಳಲ್ಲಿ ಆರಡಿ ಬೆಳೆದು ಆಜಾನುಬಾಹುವಾಗಿದ್ದಾನೆ.

ಅವಳಿಗೆ ಇನ್ಯಾವ ಅನುಮಾನವೂ ಉಳಿಯಲಿಲ್ಲ. ಯಾರಿಗಾಗಿ ಅವಳು ಈ 13 ವರ್ಷಗಳ ಕಾಲ ಪ್ರೇಮ ತಪಸ್ಸು ಮಾಡಿದ್ದಳೋ ಅದೀಗ ಫಲಿಸಿತ್ತು. ಅವಳ ಪ್ರತಿ ರಾತ್ರಿಯನ್ನು ನಿದ್ರೆಯಿಲ್ಲದೆ ಕಂಗೆಡಿಸುತ್ತಿದ್ದ ಹೇಮಂತನ ಪ್ರೇಮದ ಮೂರ್ತಿ ಸಾಕಾರವಾಗಿ ಅವಳ ಕಣ್ಣೆದುರು ನಿಂತಿತ್ತು.

ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಿಲ್ಲ. ಅವಳು ಭಾವಾವೇಗದಿಂದ ನವಿರಾಗಿ ಕಂಪಿಸುತ್ತಿದ್ದಳು. ಹೇಮಂತನಿಗೂ ಅದೇ ಅವಸ್ಥೆಯಾಗಿತ್ತು.

'ನಾನೇ ನಿನ್ನ ಋತು ಅಂತ ಹೇಗೆ ಕಂಡುಕೊಂಡೆ ಹೇಮಂತ್, ಅಲ್ಲದೆ ಕಾಲೇಜಿನಲ್ಲಿ ನಿನ್ನನ್ನು ಕುಮಾರ್ ಎಂದು ಯಾಕೆ ಪರಿಚಯಿಸಿಕೊಂಡೆ? ಜೊತೆಗೆ ಈ ಅಪಹರಣದ ನಾಟಕ....ಇದೆಲ್ಲಾ ಯಾಕೆ?....ನಂಗೇನೂ ಅರ್ಥವಾಗ್ತಿಲ್ಲ..' ಸಾವರಿಸಿಕೊಳ್ಳುತ್ತಾ ಪ್ರಶ್ನಿಸಿದಳು ಋತು.

'ಪರವಾಗಿಲ್ಲ, ಬಂಗಲೆಯ ಏಕಾಂತಕ್ಕೆ ಹೆದರುತ್ತಿದ್ದ ಹುಡುಗಿ ಹೀಗೆ ತರ್ಕಬದ್ಧವಾಗಿ ಮಾತನಾಡ್ತಿದ್ದಾಳೆ ಅಂದ್ರೆ ಆ ರಮ್ಯಾಳ ಸಹವಾಸವೇ ಅಂತ ಹೇಳಿಬಿಡ್ಬಹುದು....'

ಅವನೆಂದಾಗ ಚಕಿತಳಾಗಿ ಅವನತ್ತ ನೋಡಿದಳು ಋತು. ಹಾಗಾದರೆ ತನ್ನ ಎಲ್ಲಾ ವಿಷಯಗಳು ಇವನಿಗೆ ಗೊತ್ತು..!

'ನಿಂಗೆ ಆಶ್ಚರ್ಯ ಆಗ್ತಿರಬಹುದಲ್ವಾ ಋತು, ಎಲ್ಲಾ ವಿಷಯಗಳೂ ನಂಗೆ ಹೇಗೆ ಗೊತ್ತು ಅಂತ, ಹೇಳಿ ಬಿಡ್ತೀನಿ, ಇನ್ಯಾವ ಸಸ್ಪೆನ್ಸೂ ಉಳ್ಸೋದಿಲ್ಲ...' ಎಂದವನು ನಿಡಿದಾಗಿ ಉಸಿರೆಳೆದುಕೊಂಡು ಆರಂಭಿಸಿದ.

'ಋತು....ಈಗ 13 ವರ್ಷಗಳ ಹಿಂದೆ ಹೈಸ್ಕೂಲಿನಲ್ಲಿ ನಾವಾಡಿದ ಶ್ರೀನಿವಾಸ ಕಲ್ಯಾಣ ನೃತ್ಯ ರೂಪಕ....ತಾಳಿ ಕಟ್ಟುವ ಸಮಯದಲ್ಲಿ ಆ ಮಂತ್ರಘೋಷ, .ಆ ಸಂಭ್ರಮ....ನನ್ನ ಕಂಗಳಿಗೆ ನೀನು ಪದ್ಮಾವತಿಯಂತೆಯೇ ಕಂಡಿದ್ದೆ. ನಿನ್ನ ಕಂಗಳಲ್ಲೂ ಯಾವುದೋ ಹೊಸಭಾವ....ನಿನಗೆ ತಾಳಿ ಕಟ್ಟಿದಾಗ ನೀನು ನನ್ನವಳು ಎಂಬುದೇ ಖುಷಿ ಕೊಟ್ಟಿತ್ತು. ಅದು ನಾಟಕವಾದರೂ ನನಗೆ ಹಾಗೆನಿಸಲೇ ಇಲ್ಲ. ಮತ್ತೆ ನಾಲ್ಕಾರು ಬಾರಿ ನಿನ್ನ ನೋಡಿದಾಗ ರೋಮಾಂಚಿತನಾಗಿ ಹಾಗೆಯೇ ನಿಂತುಬಿಡುತ್ತಿದ್ದೆ. ಆದ್ರೆ ಅದನ್ನೇ ಲವ್ ಅಂತಾರೆ ಅಂತ ನಂಗೆ ಖಂಡಿತಾ ಗೊತ್ತಿರ್ಲಿಲ್ಲ. ನಿನ್ನ ಜೊತೆ ಮಾತಾಡೋಕೆ ಒಂಥರಾ ಸಂಕೋಚ....ಆಗ್ಲೇ ನ್ಯಾಷನಲ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ ಅಪ್ಪನಿಗೆ ಕೋಲ್ಕತ್ತಕ್ಕೆ ವರ್ಗವಾಗಿತ್ತು. ಮನಸ್ಸಿಲ್ಲದ ಮನಸ್ಸಿನಿಂದ ಅವರನ್ನೇ ಹಿಂಬಾಲಿಸಿದ್ದೆ. ಮತ್ತೆ ಮೂರು ಮೂರು ವರ್ಷಗಳಿಗೊಮ್ಮೆ ಉತ್ತರ ಭಾರತವನ್ನು ಸುತ್ತುವುದೇ ಆಯಿತು. ಈ ನಡುವೆ ಪತ್ರಿಕೋದ್ಯಮದಲ್ಲಿ ಪದವಿ ಮಾಡಿಕೊಂಡೆ. ದೆಹಲಿಯಲ್ಲಿದ್ದಾಗ ನನ್ನಿಷ್ಟದ ವೃತ್ತಿಯಾಗಿ ಪ್ರೈವೇಟ್ ಡಿಟೆಕ್ಟಿವ್ ಒಬ್ಬರ ಜೊತೆ ಅಸಿಸ್ಟೆಂಟಾಗಿ ಸೇರಿಕೊಂಡೆ. ಒಂದಿಬ್ಬರ ಬಳಿ ಕೆಲಸ ಮಾಡುತ್ತಾ ನಾನೇ ಸ್ವಂತವಾಗಿ ಪತ್ತೇದಾರಿಕೆ ನಡೆಸುವಷ್ಟು ಬೆಳೆದೆ. ಆದ್ರೆ ನಂಗೆ ನಿನ್ನ ಮರೆಯಲಾಗ್ಲಿಲ್ಲ. ನನ್ನ ಚಿಕ್ಕಂದಿನ ಪ್ರೀತಿಯ ವಿಷಯವನ್ನು ಅಪ್ಪನಿಗೆ ಹೇಳಬೇಕೆಂದಿರುವಾಗ್ಲೇ, ಅಪ್ಪ ಸರ್ವೀಸಿನಲ್ಲಿದ್ದಾಗ್ಲೇ ರೋಡ್ ಆಕ್ಸಿಡೆಂಟ್ ಒಂದ್ರಲ್ಲಿ ತೀರಿಹೋದ್ರು....ಪಾಪ ಅಮ್ಮ, ಅವಳನ್ನು ಕರೆದುಕೊಂಡು ಎರಡು ವರ್ಷದ ಹಿಂದೆ ಇಲ್ಲಿಗೆ ಬಂದೆ.

ಅಪ್ಪ ಮೊದಲೇ ಕಟ್ಟಿಸಿ ಬಾಡಿಗೆ ಕೊಟ್ಟಿದ್ದ ಮನೆಯನ್ನು ಬಿಡಿಸಿಕೊಂಡು ಅಮ್ಮನೊಂದಿಗೆ ಇರತೊಡಗಿದೆ. ನಂಗೆ ನಿನ್ನ ಮರೆಯಲಾಗ್ಲಿಲ್ಲ. ನಿಂಗೆ ಮದ್ವೆಯಾಗಿದ್ಯಾ ಅಥ್ವಾ ಇಲ್ವಾ ಅಂತ ನಾನು ತಿಳಿದುಕೊಳ್ಳಬೇಕಿತ್ತು. ನಿನ್ನ ತಂದೆ ಫೇಮಸ್ ಲಾಯರ್ ಪುರುಷೋತ್ತಮ್ ಅನ್ನೋದು ಮಾತ್ರ ನಂಗೆ ಗೊತ್ತಿತ್ತು. ಸರಿ.... ನಿನ್ನ ವಿಷ್ಯ ತಿಳಿಯೋಕೆ ಪತ್ತೇದಾರಿಕೆ ಶುರು ಮಾಡ್ದೆ, ನನ್ನ ಕಡೆಯವ್ರು ನಿನ್ನ ಹಿಂಬಾಲಿಸಿ ಬಂದು ನಿನ್ನ ಬಗ್ಗೆ ನಂಗೆ ಮಾಹಿತಿ ಕೊಡ್ತಿದ್ರು. ಅವತ್ತು ಕೆರೆದಂಡೆಯಲ್ಲಿ ನೀನು ನನ್ನ ವಿಷಯವನ್ನು ರಮ್ಯಾಳಿಗೆ ಹೇಳ್ತಿದ್ದಾಗ ಕೇಳಿಸಿಕೊಂಡವನು ಬೇರೆ ಯಾರೂ ಅಲ್ಲ ನಮ್ಮವನೇ. ಅವನಿಂದ ನೀನೂ ನನ್ನಂತೆ ನನಗಾಗಿ ಕಾದಿರುವುದು ಗೊತ್ತಾಯ್ತು. ಆಗ್ಲೇ ನಿಮ್ಮ ಕಾಲೇಜಿನಲ್ಲಿ ಪ್ರಶಾಂತನ ಕೊಲೆಯಾಗಿದ್ದರಿಂದ ಪೊಲೀಸರು ಪತ್ತೇದಾರಿಕೆಗೆ ನನ್ನ ಕರೆದ್ರು. ಪ್ರಿನ್ಸಿಪಲ್ ಭುವನೇಶ್ವರಿ ಆಂಟಿಗೆ ನಮ್ಮ ಪ್ರೀತಿಯ ವಿಷಯವನ್ನು ಮೊದಲೇ ತಿಳಿಸಿದ್ದೆ. ಅದಕ್ಕೆ ಅವರು ನನ್ನನ್ನು ನಿಂಗೆ ಮೊದ್ಲೇ ಪರಿಚಯಿಸಿದ್ರು. ಪ್ರೇಮಕಥೆಗೆ ಸ್ವಲ್ಪ ಥ್ರಿಲ್ ಇರ್ಲಿ ಅಂತ ಒಂದಷ್ಟು ಸುಳ್ಳು ಹೇಳಿದ್ವಿ ಅಷ್ಟೇ.'

(ಸಶೇಷ)